# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ

******

**ಪ್ರಶ್ನೆ** : **ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ವಾರ್ಡ್ ನಂ.14 ರಾಮನಗರ ವ್ಯಾಪ್ತಿಯಲ್ಲಿ ಇತ್ತೀಚೆಗೆ ಹಣದ ಆಮಿಷ ಒಡ್ಡಿ ಬಲವಂತವಾಗಿ ಹಿಂದೂ ಧರ್ಮದ ಸಾರ್ವಜನಿಕರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಿಸಿರುತ್ತಾರೆ. ಇದರ ನಂತರ ಕ್ರಿಶ್ಚಿಯನ್ ಧರ್ಮದಂತೆ ನಡೆದುಕೊಳ್ಳಬೇಕು. ನೀವು ಬೇರೆ ಯಾವುದೇ ಹಿಂದೂ ದೇವರನ್ನು ಪೂಜೆ ಮಾಡುವಂತಿಲ್ಲ ಎಂದು ಒತ್ತಡ ಹೇರಿರುತ್ತಾರೆ. ಅಲ್ಲದೇ ಮನೆಯಲ್ಲಿರುವ ಆಂಜನೇಯ, ಜಂಬುಲಮ್ಮ, ಮಾರಮ್ಮ, ಮನೆ ದೇವರುಗಳ ಫೋಟೋಗಳನ್ನು ತೆಗೆದುಕೊಂಡು ಕೀನಾಲೆಗೆ ಎಸೆಯುವ ಮತಾಂತರ ನಿಷೇಧದ ಕುರಿತು.**

ಉತ್ತರ:- ಶ್ರೀ ಶಂಕರ್ ಬಿನ್ ಲಕ್ಷ್ಮಣ್, ರಾಮನಗರ, 14ನೇ ವಾರ್ಡ್, ಕಾರಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ ರವರು ದಿನಾಂಕ: 11-12-2022 ರಂದು ಕಾರಟಗಿ ಠಾಣೆಯಲ್ಲಿ ನೀಡಿದ ದೂರಿನ ಸಾರಾಂಶದ ಮೇರೆಗೆ ಕಾರಟಗಿ ಠಾಣಾ ಮೊಕದ್ದಮೆ ಸಂಖ್ಯೆ 246/2022 ಕಲಂ 323, 355, 504, 506 IPC & 5 U/S The Karnataka Protection of Right to Freedom Of Religion Ordinace-2022ರ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. ಪ್ರಕರಣದ ಸಾರಾಂಶ ಕೆಳಗಿನಂತಿದೆ.

ಶ್ರೀ ಶಂಕರ್ ಬಿನ್ ಲಕ್ಷ್ಮಣ್ ರವರಿಗೆ ಹಣದ ಆಮಿಶ ಒಡ್ಡಿ ಬಲವಂತವಾಗಿ ದಿಕ್ಷಾ ಸ್ನಾನ ಎಂಬ ಹೆಸರಿನಲ್ಲಿ ನೀರಿನಲ್ಲಿ ಮುಳುಗಿಸಿ ಇಂದಿನಿಂದ ಪಿರ್ಯಾದಿ ಹಾಗೂ ಅವರ ಕುಟುಂಬದ ಸದಸ್ಯರು ಬಲವಂತವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಿಸಿದ್ದು, ನಂತರ ಕ್ರಿಶ್ಚಿಯನ್ ಧರ್ಮದಂತೆ ನಡೆದು ಕೊಳ್ಳಬೇಕು ಹಾಗೂ ಬೇರೆ ಯಾವುದೇ ಹಿಂದೂ ದೇವರನ್ನು ಪೂಜೆ ಮಾಡುವಂತಿಲ್ಲ ಎಂದು ತಿಳಿಸಿ ಅವರ ಮನೆಯಲ್ಲಿರುವ ಅಂಜನೇಯ, ಜಂಬುಲಮ್ಮ, ಮಾರಮ್ಮ, ಮನೆ ದೇವರುಗಳ ಫೋಟೋಗಳನ್ನು ತೆಗೆದುಕೊಂಡು ಕೆನಾಲ್‌ಗೆ ಕರೆದುಕೊಂಡು ಹೋಗಿ ಫಾಸ್ಟರ್ ಸತ್ಯನಾರಾಯಣ @ ಸ್ಯಾಮುಯೆಲ್ ಇವನು ಕಾರಟಗಿ ತಾಲೂಕಿನ ರಾಮನಗರದಲ್ಲಿರುವ ಗ್ರೇಸ್ ಪ್ರಾರ್ಥನಾಲಯದಲ್ಲಿ ಬೈಬಲ್ ಓದಿಸುವುದರ ಮುಖಾಂತರ ಪಿರ್ಯಾದಿದಾರರ ಮನೆಯಲ್ಲಿನ ಎಲ್ಲಾ ದೇವರ ಪೋಟೋಗಳನ್ನು ಕೆನಾಲ್‌ಗೆ ಎಸೆದು, ಅವರ ದೇವರುಗಳನ್ನು ಯಾವುದೇ ಕಾರಣಕ್ಕೂ ಪೂಜೆ ಮಾಡುವಂತಿಲ್ಲ ಮತ್ತು ಆರಾಧನೆ ಮಾಡುವಂತಿಲ್ಲಾ ಎಂದಿರುತ್ತಾರೆ.

ಒಂದು ವೇಳೆ ಪಿರ್ಯಾದಿದಾರರು ಅವರ ದೇವರನ್ನು ಪೂಜೆ ಮಾಡಿದ್ದೇ ಆದರೆ ಸದರಿಯವರು ಸಾಯುತ್ತೀರಿ ಇಲ್ಲವೆಂದರೆ ದೆವ್ವ ಪಿಶಾಚಿ ಆಗುತ್ತೀರಿ. ಇವೆಲ್ಲವನ್ನು ಮೀರಿ, ಒಂದು ವೇಳೆ ಹಿಂದೂ ಧರ್ಮಕ್ಕೆ ಮರಳಿದರೆ ಪಿರ್ಯಾದಿದಾರರನ್ನು ಸಾಯಿಸುವುದಾಗಿ ಹಾಗೂ ಅವರ ಮಕ್ಕಳನ್ನು ಅಪಹರಣ ಮಾಡಿಸಿ, ಮಕ್ಕಳ ಮೇಲೆ ಅತ್ಯಾಚಾರ ಮಾಡಿಸುವುದಾಗಿ ಪಿರ್ಯಾದಿದಾರರ ಕುಟುಂಬದವರಿಗೆ ಬೆದರಿಕೆ ಹಾಕಿರುತ್ತಾರೆ. ಆದರೆ ಪಿರ್ಯಾದುದಾರರು ದಿನಾಂಕ: 06.02.2022 ರಂದು ರಾಯಚೂರು ಜಿಲ್ಲೆ ಲಿಂಗಸೂರು ಪಟ್ಟಣಕ್ಕೆ ಅವರ ಹೆಂಡತಿಯೊಂದಿಗೆ ಜೀವನ ನಿರ್ವಹಣೆಗೆ ವ್ಯಾಪಾರ ಮಾಡಲು ಹೋಗುವ ಸಮಯದಲ್ಲಿ ಫಾಸ್ಟರ್ ಸತ್ಯನಾರಾಯಣ @ ಸ್ಯಾಮುವೆಲ್ ಮತ್ತು ಈತನ ಹೆಂಡತಿ ಶಿವಮ್ಮ @ ಸಾರಾ ಇವರು ಮಕ್ಕಳನ್ನು ಇಲ್ಲಿಯೇ ಬಿಟ್ಟು ಹೋಗುವಂತೆ ತಿಳಿಸಿರುತ್ತಾರೆ. ಆಗ ಪಿರ್ಯಾದಿದಾರರು ತನ್ನ ಮೂವರು ಮಕ್ಕಳನ್ನು ರಾಮನಗರದಲ್ಲಿರುವ ಅವರ ಶೆಡ್ನಲ್ಲಿ ಬಿಟ್ಟು ಹೋಗಿರುತ್ತಾರೆ. ಈ ಸಮಯವನ್ನು ನೋಡಿಕೊಂಡ ಫಾಸ್ಟರ್ ಸತ್ಯನಾರಾಯಣ @ ಸ್ಯಾಮುವೆಲ್ ಮತ್ತು ಈತನ ಹೆಂಡತಿಯಾದ ಶಿವಮ್ಮ @ ಸಾರಾ ಇವರು ಇಬ್ಬರು ಸೇರಿಕೊಂಡು ಪಿರ್ಯಾದಿದಾರರ ಶೆಡ್ನಲ್ಲಿರುವ 3 ಮಕ್ಕಳನ್ನು ಕರೆದುಕೊಂಡು ಹೋಗಿ ಚರ್ಚ್ ಹೆಸರಿನಲ್ಲಿ ಉಚಿತವಾಗಿ ಕೆಲಸ ಮಾಡಿಸುವುದು ಮತ್ತು ಹೊಸದಾಗಿ ಕಟ್ಟುತ್ತಿರುವ ಚರ್ಚ್‌ಗೆ ನೀರು ಬಿಡಲು ಕರೆದುಕೊಂಡು ಹೋಗುತ್ತಿದ್ದರು, ಪ್ರತಿ ದಿನ ಇದೇ ರೀತಿಯಾಗಿ ಕೆಲಸಕ್ಕೆ

ಕರೆದುಕೊಂಡು ಹೋಗುವುದು ಮತ್ತು ಮನೆಗೆ ಕರೆ ತರುತ್ತಿದ್ದರು. ಈ ವಿಷಯವನ್ನು ಪಿರ್ಯಾಧಿದಾರರು ಅವರ ಕುಲಸ್ಥರಿಗೆ ವಿಷಯವನ್ನು ಹೇಳಿದ್ದು, ಈ ವಿಷಯ ತಿಳಿದು ಫಾಸ್ಟರ್ ಸತ್ಯನಾರಾಯಣ @ ಸ್ಯಾಮುಯೆಲ್ ಇವನು ಪಿರ್ಯಾಧಿ ಹಾಗೂ ಹೆಂಡತಿ ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಬೈದು, ಚಪ್ಪಲಿಯಿಂದ ಹೊಡೆದು ಪ್ರಾಣ ಬೆದರಿಕೆ ಹಾಕಿ ಹಲ್ಲೆ ಮಾಡಿರುತ್ತಾರೆ. ಪಿರ್ಯಾಧಿ ಹಾಗೂ ಅವರ ಕುಟುಂಬದವರಿಗೆ ಜೀವ ರಕ್ಷಣೆ ನೀಡಿ ಎಂದು ನೀಡಿದ ದೂರಿನ ಮೇರೆಗೆ ಕಾರಟಗಿ ಠಾಣಾ ಗುನ್ನೆ ನಂ 246/2022 ಕಲಂ 323, 355, 504, 506 IPC & 5 U/S The Karnataka Protection of Right to Freedom Of Religion Ordinace-2022 ರ ಪ್ರಕಾರ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ತನಿಖೆಯಲ್ಲಿರುತ್ತದೆ.

ಸದರಿ ಪ್ರಕರಣದಲ್ಲಿ ಮೂರು ಜನ ಆರೋಪಿತರ ಪೈಕಿ ಆರೋಪಿ 1) ಫಾಸ್ಟರ್ ಸತ್ಯ ನಾರಾಯಣ @ ಸ್ಯಾಮುಯೆಲ್ ತಂದೆ ರಾಮಚಂದ್ರಪ್ಪ, 2) ಶಿವಮ್ಮ @ ಸಾರಾ ಗಂಡ ಫಾಸ್ಟರ್ ಸತ್ಯ ನಾರಾಯಣ @ ಸ್ಯಾಮುಯೆಲ್ ರವರುಗಳು ರಾಮನಗರದ ಮನೆಯ ಹತ್ತಿರ ಇರುವ ಬಗ್ಗೆ ಖಚಿತವಾದ ಭಾತ್ಮಿ ತಿಳಿದ ಬಂದಿದ್ದರಿಂದ ಆರೋಪಿತರನ್ನು ಠಾಣೆಗೆ ಕರೆ ತಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಕೂಲಂಕಷವಾಗಿ ವಿಚಾರಿಸಲಾಗಿ ಆರೋಪಿತರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದು, ದಸ್ತಗಿರಿ ನಿಯಮಾವಳಿಯನ್ನು ಅನುಸರಿಸಿ ವೈದ್ಯಕೀಯ ಪರೀಕ್ಷೆ ಮಾಡಿಸಿ ಅರೋಪಿತರಿಬ್ಬರನ್ನು ದಿನಾಂಕ: 11-12-2022 ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಮಾನ್ಯ ನ್ಯಾಯಾಲಯವು ಸದರಿ ಆರೋಪಿತರಿಗೆ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿರುತ್ತದೆ.

ಪ್ರಕರಣದಲ್ಲಿಯ ಆರೋಪಿ (3) ಚಿರಂಜೀವಿ ತಂದೆ ಫಾಸ್ಟರ್ ಸತ್ಯ ನಾರಾಯಣ @ ಸ್ಯಾಮುಯೆಲ್ ಕಲ್ಯಾಣಂ, ಈತನು ಈಗಾಗಲೇ ಕಾರಟಗಿ ಠಾಣೆ ಗುನ್ನೆ ನಂ 243/2022 ಕಲಂ 376 ಐಪಿಸಿ ಮತ್ತು 4, 8, 12, ಪೋಕ್ಸೊ ಕಾಯ್ದೆ 2012ರಲ್ಲಿ ಮಾನ್ಯ ನ್ಯಾಯಾಂಗ ಬಂಧನದಲ್ಲಿದ್ದು, ಸದರಿಯವರ ವಿರುದ್ದ ಬಾಡಿ ವಾರೆಂಟನ್ನು ಪಡೆದುಕೊಳ್ಳಲಾಗುವುದು. ಸದರಿ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.

ಸಂಖ್ಯೆ: ಒಇ 711 ಎಸ್ ಎಸ್ ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

C 139